# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 162(220) |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.12.2024 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳು ಯಾವುವು: ಸದರಿ ಪ್ರಾಧಿಕಾರಗಳ ಸ್ಥಾಪನೆಯ ಉದ್ದೇಶ ಮತ್ತು ಕಾರ್ಯವ್ಯಾಪ್ತಿ ಏನು; | ರಾಜ್ಯದಲ್ಲಿ ಒಟ್ಟು 32 ನಗರಾಭಿವೃದ್ಧಿ ಪ್ರಾಧಿಕಾರಗಳಿವೆ (ಅನುಬಂಧ-1)ರಲ್ಲಿ ನೀಡಿದೆ.<br><br>ರಾಜ್ಯದಲ್ಲಿನ ನಗರ ಪ್ರದೇಶಗಳನ್ನು ಮತ್ತು ಅವುಗಳಿಗೆ ಹೊಂದಿಕೊಂಡಿರುವಂತಹ ಪ್ರದೇಶಗಳನ್ನು ಯೋಜನಾ ಬದ್ಧವಾಗಿ ಅಭಿವೃದ್ಧಿಪಡಿಸಲು ಮತ್ತು ಅದಕ್ಕೆ ಸಂಬಂಧಿಸಿದ ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸುವ ಸಲುವಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.<br><br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ಕಲಂ (14)ರನ್ವಯ<br><br>"ಪ್ರಾಧಿಕಾರದ ಉದ್ದೇಶಗಳು ನಗರ ಪ್ರದೇಶಗಳ ಅಭಿವೃದ್ಧಿಯನ್ನು ಯೋಜಿಸುವುದು, ಉತ್ತೇಜಿಸುವುದು ಮತ್ತು ಸಂರಕ್ಷಿಸುವುದು ಮತ್ತು ಈ ಉದ್ದೇಶಗಳಿಗಾಗಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ನಗರ ಪ್ರದೇಶದ ಅಥವಾ ನಗರ ಪ್ರದೇಶದ ಹೊರಗಿರುವ ಯಾವುದೇ ಚರ ಹಾಗೂ ಚಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ, ಹೊಂದುವ ನಿರ್ವಹಣೆ ಮಾಡುವ ಮತ್ತು ವಿಲೇವಾರಿ ಮಾಡುವ ಮತ್ತು ಕಟ್ಟಡಗಳ ನಿರ್ಮಾಣ ಇಂಜಿನಿಯರಿಂಗ್ ಕಾಮಗಾರಿಗಳು ಮತ್ತಿತರರ ಕಾಮಗಾರಿಗಳಿಗೆ ಮತ್ತು ಸಾಮಾನ್ಯವಾಗಿ ಅಭಿವೃದ್ಧಿಗಾಗಿ ಅವಶ್ಯವಿರುವ ಎಲ್ಲಾ ಅಗತ್ಯವಾದ ಮತ್ತು ಸೂಕ್ತವಾದ ವಸ್ತುಗಳಿಗಾಗಿ ಮತ್ತು ಅದರ ಇತರ ಪ್ರಾಸಂಗಿಕ ಉದ್ದೇಶಗಳಿಗಾಗಿ ಅಧಿಕಾರವನ್ನು ಹೊಂದಿರತಕ್ಕದ್ದು" ಎಂದು ಇರುತ್ತದೆ. ಸದರಿ ನಿಯಮದಂತೆ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುತ್ತವೆ. |
| ಆ) | ಈ ಪ್ರಾಧಿಕಾರಗಳು ಮಾಡಿರುವ ಅಭಿವೃದ್ಧಿ ಕಾರ್ಯಗಳು ಯಾವವು; | ನಗರಾಭಿವೃದ್ಧಿ ಪ್ರಾಧಿಕಾರಗಳು ಸರ್ಕಾರದಿಂದ ಅನುಮೋದನೆಯಾದ |

| | | |
|---|---|---|
| | ಬಹುತೇಕ ಪ್ರಾಧಿಕಾರಗಳು ಮೂಲ ಉದ್ದೇಶವನ್ನೇ ಮರೆತಿರುವುದನ್ನು ಸರ್ಕಾರ ಗಮನಿಸಿದೆಯೇ; | ಮಹಾಯೋಜನೆ ಹಾಗೂ ವಲಯ ನಿಯಮಾವಳಿಗಳಲ್ಲಿ ಕಲ್ಪಿಸಿರುವ ಅವಕಾಶದಂತೆ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಅವಕಾಶಗಳಂತೆ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಅಭಿವೃದ್ಧಿಗಳನ್ನು ಕೈಗೊಳ್ಳಲಾಗುತ್ತಿದೆ. ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿ, ಹಸ್ತಾಂತರಿಸಲಾಗಿರುವ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಿದೆ. |
| **ಇ)** | ಕಳೆದ 5 ವರ್ಷಗಳಿಂದ ಈ ಪ್ರಾಧಿಕಾರಗಳು ರಚಿಸಿರುವ ಬಡಾವಣೆಗಳಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಿಸಿ ಹಂಚಿಕೆ ಮಾಡಿವೆ; ಈ ನಿವೇಶನಗಳ ಪೈಕಿ ಆರ್ಥಿಕವಾಗಿ ದುರ್ಬಲರಾದವರು ಸೇರಿದಂತೆ ಮಧ್ಯಮ ವರ್ಗದ ಜನರಿಗೆ ಎಷ್ಟು ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿ, ಹಸ್ತಾಂತರಿಸಲಾಗಿದೆ; (ಪ್ರಾಧಿಕಾರವಾರು ಮಾಹಿತಿ ನೀಡುವುದು) | |
| **ಈ)** | ಈ ಪ್ರಾಧಿಕಾರಗಳು ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಿ ಈ ಮೂಲಕ ಬಡವರಿಗೆ ಅನುಕೂಲ ಮಾಡಿಕೊಡುವ ಯೋಜನೆ / ಕಾರ್ಯಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡಲು ಸರ್ಕಾರ ಕ್ರಮ ವಹಿಸುವುದೇ? | ಪ್ರಾಧಿಕಾರಗಳು ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿ ಆ ಮೂಲಕ ಬಡವರಿಗೆ ಅನುಕೂಲ ಮಾಡಿಕೊಂಡುವ ಯೋಜನೆ / ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಕಾಲಕಾಲಕ್ಕೆ ಸುತ್ತೋಲೆ / ನಿಯಮ / ಕಾಯ್ದೆ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದರಂತೆ ಕ್ರಮವಹಿಸುವಂತೆ ಸಭೆ ನಡೆಸಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 292 ಬೆಂರೂಪ್ರಾ 2024 (ಇ)**

(**ಬಿ.ಎಸ್. ಸುರೇಶ**)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಅನುಬಂಧ-1

| ಕ್ರ.ಸಂ. | ನಗರಾಭಿಫವೃದ್ಧಿ ಪ್ರಾಧಿಕಾರಗಳು |
|---|---|
| 1. | ಬಾಗಲಕೋಟೆ |
| 2. | ಬೆಳಗಾವಿ |
| 3. | ಬಳ್ಳಾರಿ |
| 4. | ಬೀದರ್ |
| 5. | ವಿಜಯಪುರ |
| 6. | ಚಾಮರಾಜನಗರ-ರಾಮಸಮುದ್ರ |
| 7. | ಚಿಕ್ಕಮಗಳೂರು |
| 8. | ಚಿತ್ರದುರ್ಗ |
| 9. | ಚಿಕ್ಕಬಳ್ಳಾಪುರ |
| 10. | ದಾವಣಗೆರೆ-ಹರಿಹರ |
| 11. | ಗದಗ-ಬೆಟಗೇರಿ |
| 12. | ಕಲಬುರಗಿ |
| 13. | ಹಾಸನ |
| 14. | ಹಾವೇರಿ |
| 15. | ಹೊಸಪೇಟೆ |
| 16. | ಹುಬ್ಬಳ್ಳಿ-ಧಾರವಾಡ |
| 17. | ಕಾರವಾರ |
| 18. | ಕೆ.ಜಿ.ಎಫ್. |
| 19. | ಕೋಲಾರ |
| 20. | ಕೊಪ್ಪಳ |
| 21. | ಮಡಿಕೇರಿ |
| 22. | ಮಂಡ್ಯ |
| 23. | ಮಂಗಳೂರು |
| 24. | ಮೈಸೂರು |
| 25. | ರಾಯಚೂರು |
| 26. | ಶಿವಮೊಗ್ಗ |
| 27. | ತುಮಕೂರು |
| 28. | ಉಡುಪಿ-ಮಲ್ಪೆ |
| 29. | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು |
| 30. | ಯಾದಗಿರಿ |
| 31. | ರಾಣೇಬೆನ್ನೂರು |
| 32. | ಶಿರಾ |

## ಅನುಬಂಧ-2

| ಕ್ರ.ಸಂ. | ನಗರಾಭಿವೃದ್ಧಿ ಪ್ರಾಧಿಕಾರಗಳು | ಕಳೆದ 5 ವರ್ಷಗಳಿಂದ ಈ ಪ್ರಾಧಿಕಾರಗಳು ರಚಿಸಿರುವ ಬಡಾವಣೆಗಳಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಿಸಿ ಹಂಚಿಕೆ ಮಾಡಿವೆ; ಈ ನಿವೇಶನಗಳ ಪೈಕಿ ಆರ್ಥಿಕವಾಗಿ ದುರ್ಬಲರಾದವರು ಸೇರಿದಂತೆ ಮಧ್ಯಮ ವರ್ಗದ ಜನರಿಗೆ ಎಷ್ಟು ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಲಾಗಿದೆ; (ಪ್ರಾಧಿಕಾರವಾರು ಮಾಹಿತಿ ನೀಡುವುದು) | |
|---|---|---|---|
| | | ಯೋಜನೆ | ಹಂಚಿಕೆ ಮಾಡಲಾದ/ಮಾಡಲು ಕ್ರಮ ವಹಿಸಿರುವ ನಿವೇಶನಗಳ ಸಂಖ್ಯೆ |
| 1. | ಬಾಗಲಕೋಟೆ | ಯಾವುದು ಇರುವುದಿಲ್ಲ | - |
| 2. | ಬೆಳಗಾವಿ | ಯಾವುದು ಇರುವುದಿಲ್ಲ | - |
| 3. | ಬಳ್ಳಾರಿ | ಯಾವುದು ಇರುವುದಿಲ್ಲ | - |
| 4. | ಬೀದರ್ | ಗೋರನಹಲ್ಲಿ ಬಿ ಗ್ರಾಮ ಸ.ನಂ 22/2 ಮತ್ತು 21/1 | ಒಟ್ಟು 156 ನಿವೇಶಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ 23 ನಿವೇಶನಗಳನ್ನು ಇ-ಹರಾಜು ಮಾಡಲಾಗಿರುತ್ತದೆ |
| 5. | ವಿಜಯಪುರ | ಯಾವುದು ಇರುವುದಿಲ್ಲ | - |
| 6. | ಚಾಮರಾಜನಗರ-ರಾಮಸಮುದ್ರ | ಚಾಮರಾಜನಗರ-ಮಸಗಾಪುರ ಗ್ರಾಮದ ವಿವಿಧ ಸ. ನಂಗಳ ಒಟ್ಟು 14ಎಕರೆ 24ಗುಂಟೆ ಪ್ರದೇಶದಲ್ಲಿ ಶೇ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲಾಗಿರುತ್ತತ್ತದೆ. | ಶೀಘ್ರವಾಗಿ ಅರ್ಜಿಗಳನ್ನು ಆಹ್ವಾನಿಸಿ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| 7. | ಚಿಕ್ಕಮಗಳೂರು | ಅಟಲ್ ಬಿಹಾರಿ ವಾಜಪೇಯಿ ವಸತಿ ಬಡಾವಣೆ. | ಒಟ್ಟು 1114 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. |
| 8. | ಚಿತ್ರದುರ್ಗ | ಯಾವುದು ಇರುವುದಿಲ್ಲ | - |
| 9. | ಚಿಕ್ಕಬಳ್ಳಾಪುರ | ಯಾವುದು ಇರುವುದಿಲ್ಲ | - |
| 10. | ದಾವಣಗೆರೆ-ಹರಿಹರ | ಯಾವುದು ಇರುವುದಿಲ್ಲ | - |
| 11. | ಗದಗ-ಬೆಟಗೇರಿ | ಯಾವುದು ಇರುವುದಿಲ್ಲ | - |
| 12. | ಕಲಬುರಗಿ | ಕುಸನೂರು ಬಡಾವಣೆ | ಒಟ್ಟು 726 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ |
| 13. | ಹಾಸನ | ಯಾವುದು ಇರುವುದಿಲ್ಲ | - |
| 14. | ಹಾವೇರಿ | ಯಾವುದು ಇರುವುದಿಲ್ಲ | - |
| 15. | ಹೊಸಪೇಟೆ | ಯಾವುದು ಇರುವುದಿಲ್ಲ | - |

| | | | |
|---|---|---|---|
| 16. | ಹುಬ್ಬಳ್ಳಿ-ಧಾರವಾಡ | ಯಾವುದು ಇರುವುದಿಲ್ಲ | - |
| 17. | ಕಾರವಾರ | ಯಾವುದು ಇರುವುದಿಲ್ಲ | - |
| 18. | ಕೆ.ಜಿ.ಎಫ್. | ಯಾವುದು ಇರುವುದಿಲ್ಲ | - |
| 19. | ಕೋಲಾರ | ಯಾವುದು ಇರುವುದಿಲ್ಲ | - |
| 20. | ಕೊಪ್ಪಳ | ಒಂದು ವಸತಿ ಯೋಜನೆಯನ್ನು ಕೈಗೊಳ್ಳಲಾಗಿದೆ | 88 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ |
| 21. | ಮಡಿಕೇರಿ | ಯಾವುದು ಇರುವುದಿಲ್ಲ | - |
| 22. | ಮಂಡ್ಯ | ಯಾವುದು ಇರುವುದಿಲ್ಲ | - |
| 23. | ಮಂಗಳೂರು | ಕುಂಜತ್ತಬೈಲ್ ವಸತಿ ಬಡಾವಣೆ | 63 ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ವಹಿಸಲಾಗಿದೆ |
| 24. | ಮೈಸೂರು | ಯಾವುದು ಇರುವುದಿಲ್ಲ | - |
| 25. | ರಾಯಚೂರು | ಯಾವುದು ಇರುವುದಿಲ್ಲ | - |
| 26. | ಶಿವಮೊಗ್ಗ | ಊರಗಡೂರು ಗ್ರಾಮದ 60 ಎಕರೆ 30 ಗುಂಟೆ ಪ್ರದೇಶದಲ್ಲಿನ ವಸತಿ ಬಡಾವಣೆ | 431 ನಿವೇಶನಗಳನ್ನು ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. |
| 27. | ತುಮಕೂರು | ಯಾವುದು ಇರುವುದಿಲ್ಲ | - |
| 28. | ಉಡುಪಿ-ಮಲ್ಪೆ | ಯಾವುದು ಇರುವುದಿಲ್ಲ | - |
| 29. | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು | ಯಾವುದು ಇರುವುದಿಲ್ಲ | - |
| 30. | ಯಾದಗಿರಿ | ಯಾವುದು ಇರುವುದಿಲ್ಲ | - |
| 31. | ರಾಣೇಬೆನ್ನೂರು | ಯಾವುದು ಇರುವುದಿಲ್ಲ | - |
| 32. | ಶಿರಾ | ಯಾವುದು ಇರುವುದಿಲ್ಲ | - |

ಅಡಕ: ಪ್ರಾಧಿಕಾರವು ಸಲ್ಲಿಸಿರುವ ವರದಿಯನ್ನು ಲಗತ್ತಿಸಿದೆ

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಆಯುಕ್ತಾಲಯ.